**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 37/2018** **ಫ್ರಾಸಾ.1**
**ಚಾಸಾ.1**

| | | |
|---|---|---|
| ಸಾಕ್ಷಿದಾರರ ಹೆಸರು | - | ದಿಲೀಪ್ |
| ತಂದೆಯ ಹೆಸರು | - | ದೇವಸ್ಸೆ |
| ವಯಸ್ಸು | - | 62 ವರ್ಷ |
| ಉದ್ಯೋಗ | - | ಅಕ್ಕಸಾಲಿಗ |
| ವಿಳಾಸ | - | ತ್ರಿಶೂರು, ಕೇರಳ. |

ದಿನಾಂಕಃ 17-05-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

(ಸಾಕ್ಷಿಗೆ ಕನ್ನಡ ಭಾಷೆ ಬರುವುದಿಲ್ಲ. ಆತನಿಗೆ ಮಲಯಾಳಂ ಭಾಷೆ ಮಾತ್ರ ಬರುವ ಕಾರಣ ಉಡುಪಿ ನಗರ ಠಾಣೆಯ ಪಿ.ಎಸ್.ಐ ರವರಾದ ಶ್ರೀ ನಾರಾಯಣ ಬಿ ಇವರು ನ್ಯಾಯಾಲಯದಲ್ಲಿ ಹಾಜರಿದ್ದು ಅವರಿಗೆ ಕನ್ನಡ ಮತ್ತು ಮಲಯಾಳಂ ಭಾಷೆ ಬರುವ ಕಾರಣ ಅವರನ್ನು ಭಾಷಾಂತರಕಾರರನ್ನಾಗಿ ನೇಮಿಸಿ ಪ್ರಮಾಣ ವಚನ ಭೋದಿಸಲಾಯಿತು.)

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಚಾಸಾ 4 ನನ್ನ ತಮ್ಮ. ನಾನು ಕಳೆದ 15 ವರ್ಷಗಳಿಂದ ತ್ರಿಶೂರಿನಲ್ಲಿ ಚಿನ್ನದ ಆಭರಣಗಳನ್ನು ತಯಾರಿಸುವ ಕೆಲಸ ಮಾಡುತ್ತಿದ್ದೇನೆ. ಚಾಸಾ 4 ಸಹ ನನ್ನೊಂದಿಗೆ ಸದ್ರಿ ವ್ಯವಹಾರದಲ್ಲಿ ಇದ್ದಾನೆ. ಸದ್ರಿ ವ್ಯವಹಾರದ ಉಸ್ತುವಾರಿಯನ್ನು ನನ್ನ ತಮ್ಮ ಚಾಸಾ 4 ನೋಡಿಕೊಳ್ಳುತ್ತಿದ್ದ. ನಾನು ಮಂಗಳೂರಿನಲ್ಲಿರುವ ಮಜೀದ್ ಎನ್ನುವವರಿಂದ ಚಿನ್ನದ ಗಟ್ಟಿಗಳನ್ನು ಪಡೆದುಕೊಂಡು ನಂತರ ಅವುಗಳನ್ನು ಬಂಗಾರದ ಆಭರಣಗಳನ್ನಾಗಿ ಮಾಡಿ ಬೇರೆ ಬೇರೆ ಕಡೆ ಮಾರಾಟ ಮಾಡುತ್ತೇನೆ. ನಾನು ಬಂಗಾರದ ಆಭರಣಗಳನ್ನು ಮಾರಾಟ ಮಾಡುವಾಗ ನನ್ನ ಬಳಿ ಇರುವ ಜಾಕೆಟ್ ನ್ನು ಇರಿಸಿಕೊಂಡು ಜಾಕೇಟ್ ನಲ್ಲಿ ಅವುಗಳನ್ನು ಹಾಕಿಕೊಂಡು ಹೋಗುತ್ತೇನೆ. ಸದ್ರಿ ಜಾಕೆಟ್ ನಲ್ಲಿ 4 ಪ್ಯಾಕೆಟ್ ಗಳು ಇರುತ್ತದೆ. ಸದ್ರಿ ಜಾಕೆಟ್ ನ್ನು ನೋಡಿದರೆ ಗುರುತಿಸುತ್ತೇನೆ.

ಸೀಲ್ ಮಾಡಿರುವ ಪ್ಯಾಕೇಟ್ ನ್ನು ತೆರೆದ ನ್ಯಾಯಾಲಯದಲ್ಲಿ ತೆಗೆದು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿಯು ಬಳಿ ಬಣ್ಣದ ಜಾಕೆಟನ್ನು ನೋಡಿ ತನ್ನದೇ ಎಂದು ಗುರುತಿಸಿರುತ್ತಾರೆ. ಅದನ್ನು ಮು.ಮಾಲು 1 ಎಂದು ಗುರುತಿಸಲಾಯಿತು.

2. ನನಗೆ 1 ನೇ ಆರೋಪಿಯ ಪರಿಚಯ ಇದೆ. ಅವರು ಪೆರ್ಡೂರಿನಲ್ಲಿ ಗಾಯತ್ರಿ ಜ್ಯುವೆಲ್ಲರ್ಸ್ ಎಂಬ ಚಿನ್ನದ ಅಂಗಡಿ ಇಟ್ಟುಕೊಂಡಿರುತ್ತಾರೆ. 1 ನೇ ಆರೋಪಿಯ ಚಿನ್ನದ ಅಂಗಡಿಗೂ ಸಹ ನಾನು ಕೇರಳದಿಂದ ಚಿನ್ನವನ್ನು ತಂದು ಮಾರಾಟ ಮಾಡುತ್ತೇನೆ.

3. ದಿನಾಂಕ 16-03-2017 ರಂದು ರಾತ್ರಿ 10 ಗಂಟೆಗೆ ನಾನು ತ್ರಿಶೂಲದಿಂದ ಚಿನ್ನದ ಆಬರಣಗಳನ್ನು ಮಾರಾಟ ಮಾಡುವ ಸಲುವಾಗಿ ಬಸ್ ನಲ್ಲಿ ಹೊರಟಿರುತ್ತೇನೆ. ಹಾಗೆ ಬರುವಾಗ ನನ್ನ ಬಿಳಿ ಜಾಕೆಟ್ ನ್ನು ಧರಿಸಿಕೊಂಡು ಅದರ ಕಿಸೆಯಲ್ಲಿ 2 ಕೆಜಿ ಚಿನ್ನವನ್ನು ಇಟ್ಟುಕೊಂಡಿರುತ್ತೇನೆ. ಮರುದಿನ ಬೆಳಿಗ್ಗೆ 5 ಗಂಟೆಗೆ ಮಂಗಳೂರಿನಿಂದ ಬಸ್ ನಲ್ಲಿ ಇಳಿದು ಪಂಪ್ ವೆಲ್ ನಲ್ಲಿರುವ ಸಿಟಿ ಲಾಡ್ಜ್ ಗೆ ಹೋಗಿ ರೂಮ್ ನಂ. 301 ನ್ನು ಪಡೆದು ಅಲ್ಲಿ ವಿಶ್ರಾಂತಿ ಪಡೆದಿರುತ್ತೇನೆ. ಬೆಳಿಗ್ಗೆ 9.10 ಗಂಟೆಗೆ ನಾನು ಅಲ್ಲಿಂದ ಮಂಗಳೂರಿನಲ್ಲಿರುವ ಮಹಾಲಕ್ಷ್ಮೀ, ಪ್ರಸನ್ನ, ರಾಜಲಕ್ಷ್ಮೀ, ಜಯ, ಮಂಗಳ ಹಾಗೂ ಪ್ರಕಾಶ ಜ್ಯುವೆಲ್ಲರ್ ಅಂಗಡಿಗಳಿಗೆ ಹೋಗಿ ಆಭರಣಗಳನ್ನು ಕೊಟ್ಟಿರುತ್ತೇನೆ. ಸದ್ರಿ ಜ್ಯುವೆಲ್ಲರಿಗಳಿಗೆ ಒಟ್ಟು 450 ಗ್ರಾಂ ಆಭರಣಗಳನ್ನು ಕೊಟ್ಟಿರುತ್ತೇನೆ. ಅಲ್ಲಿಯ ಜ್ಯುವೆಲ್ಲರಿಯ ಮಾಲೀಕರು ಮರುದಿನ ಹಣ ಕೊಡುವುದಾಗಿ ಹೇಳಿರುತ್ತಾರೆ. ನಂತರ ಅಲ್ಲಿಂದ ಮೂಡುಬಿದಿರೆಯ ದಿವ್ಯಶ್ರೀ ಎಂದು ಜ್ಯುವೆಲ್ಲರಿಗೆ ಹೋಗಿ ಅದರ ಮಾಲಿಕರಿಗೆ 67 ಗ್ರಾಂ ಆಭರಣ ಮಾರಾಟ ಮಾಡಿರುತ್ತೇನೆ. ಅವರೂ ಸಹ ನಂತರದಲ್ಲಿ ಹಣ ಕೊಡುವುದಾಗಿ ತಿಳಿಸಿರುತ್ತಾರೆ. ನಂತರ ಮೂಡುಬಿದಿರೆಯಿಂದ ನಾನು ಪೆರ್ಡೂರಿನಲ್ಲಿರುವ 1 ನೇ ಆರೋಪಿಯ ಗಾಯತ್ರಿ ಜ್ಯುವೆಲ್ಲರಿಗೆ ಬಂದಿರುತ್ತೇನೆ. ಗಾಯತ್ರಿ ಜ್ಯುವೆಲ್ಲರಿಯ ಮಾಲಿಕರು ನನಗೆ ಹಣ ಕೊಡಲು ಬಾಕಿ ಇದ್ದು, ಆದರೆ ಅವರು ಆ ದಿನ ನನಗೆ ಹಣ ನೀಡಿರುವುದಿಲ್ಲ. ನಂತರ 1 ನೇ ಆರೋಪಿ ಸದ್ರಿ ಜ್ಯುವೆಲ್ಲರಿಯಲ್ಲಿದ್ದು ಅವರು ನನ್ನನ್ನು ಅವರ ಚವರ್ ಲೆಟ್ ಕಾರಿನಲ್ಲಿ ಹಿರಿಯಡ್ಕದ ನಮ್ರತಾ ಜ್ಯುವೆಲ್ಲರಿಗೆ ಬಿಟ್ಟಿರುತ್ತಾರೆ. ಸದ್ರಿ ಕಾರನ್ನು ನೋಡಿದರೆ ಗುರುತಿಸುತ್ತೇನೆ. ಸದ್ರಿ ಕಾರಿನ ಛಾಯಾಚಿತ್ರವನ್ನು ನೋಡಿ ಸಾಕ್ಷಿ ಗುರುತಿಸಿದ್ದು, ಅದನ್ನು ನಿ.ಪಿ. 1 ಎಂದು ಗುರುತಿಸಲಾಯಿತು. 1 ನೇ ಆರೋಪಿ ನ್ಯಾಯಾಲಯದ ಮುಂದೆ ಹಾಜರಿದ್ದು, ಸಾಕ್ಷಿ ಅವರನ್ನು ನೋಡಿ ಗುರುತಿಸಿದರು.

4. ನಾನು ನಮ್ರತಾ ಜ್ಯುವೆಲ್ಲರಿಯ ಮಾಲೀಕರಿಗೆ ಈ ಹಿಂದೆ 35 ಗ್ರಾಂ ಚಿನ್ನದ ಆಭರಣಗಳನ್ನು ನೀಡಿದ್ದು, ಅದರ ಬಾಬ್ತು ಅವರು 2 ಲಕ್ಷದ 57 ಸಾವಿರದ 200 ರೂಪಾಯಿ ನನಗೆ ನೀಡಿರುತ್ತಾರೆ. ಆ ಹಣವನ್ನು ನನ್ನ ಮು.ಮಾಲು 1 ಜಾಕೆಟ್ ನಲ್ಲಿ ಹಾಕಿಕೊಂಡಿರುತ್ತೇನೆ. ಅಲ್ಲಿಂದ ನಾನು ನನ್ನ ಬಳಿ ಇದ್ದ ಬಂಗಾರದ ಆಭರಣ ಮತ್ತು ನಗದು ಹಣ 2 ಲಕ್ಷದ 57 ಸಾವಿರದ 200 ರೂಪಾಯಿಯೊಂದಿಗೆ ಹಿರಿಯಡ್ಕ ಬಸ್ ನಿಲ್ದಾಣದಿಂದ ಬಸ್ ಹತ್ತಿ ಉಡುಪಿ ಕಡೆಗೆ ಹೊರಟಿರುತ್ತೇನೆ. ಬಸ್ ನ ಮಧ್ಯದ ಎಡ ಬಾಗದ ಸೀಟಿನಲ್ಲಿ ಕುಳಿತುಕೊಂಡಿರುತ್ತೇನೆ. ಬಸ್ 5 ನಿಮಿಷ ಮುಂದೆ ಚಲಾಯಿಸಿದ ನಂತರ ಓರ್ವ ವ್ಯಕ್ತಿ ಬಂದು ನನ್ನ ಪಕ್ಕಕ್ಕೆ ಕುಳಿತಿರುತ್ತಾನೆ. ಸದ್ರಿ ವ್ಯಕ್ತಿ ತುಳುವಿನಲ್ಲಿ ಬಸ್ ಕಂಡಕ್ಟರ್ ಜೊತೆ ಮಾತನಾಡಿರುತ್ತಾನೆ. 2-3 ಸ್ಟಾಪ್ ನ ನಂತರ ಸದ್ರಿ ವ್ಯಕ್ತಿ ನನ್ನ ಅಂಗಿಯ ಕಾಲರ್ ಹಿಡಿದು ನಾನು ಪೊಲೀಸ್ ಎಂದು ಹೇಳಿ ಕೆಳಗೆ ಇಳಿಯಲು ತಿಳಿಸಿದನು. ಆಗ ಬಸ್ ನ ಒಳಗೆ ಮತ್ತಿಬ್ಬರು ಬಂದು ಅವರು 3 ಜನ ಸೇರಿ ನನ್ನನ್ನು ಬಸ್ ನಿಂದ ಕೆಳಗೆ ಎಳೆದಿರುತ್ತಾರೆ. ಆಗ ನಾನು ಬೊಬ್ಬೆ ಹೊಡೆದೆ. ಆ ಸಮಯ ಬಸ್ ನ ಹಿಂದೆ ಒಂದು ರಿಟ್ಸ್ ಕಾರ್ ಇದ್ದು ಆ 3 ಜನರೂ ಸೇರಿ ನನ್ನನ್ನು ಆ ಕಾರಿನ ಒಳಗೆ ನೂಕಿದರು.

5. ಸದ್ರಿ ಕಾರಿನ ಒಳಗಡೆ ಮತ್ತೆ 3 ಜನ ಇದ್ದರು. ಕಾರಿನಲ್ಲಿದ್ದ ಓರ್ವ ವ್ಯಕ್ತಿ ನನಗೆ ಪಿಸ್ತೂಲು ತೋರಿಸಿದ್ದು, ಉಳಿದವರು ಕೈಯಿಂದ ನನಗೆ ಹಲ್ಲೆ ಮಾಡಿರುತ್ತಾರೆ. ನನ್ನ ಜಾಕೆಟ್ ನಲ್ಲಿದ್ದ ನಗದು ಹಣ 2 ಲಕ್ಷದ 57 ಸಾವಿರದ 200 ರೂಪಾಯಿ ಮತ್ತು ಆಭರಣಗಳನ್ನು ದೋಚಿಕೊಂಡರು. ಸದ್ರಿ ಪಿಸ್ತೂಲನ್ನು ನೋಡಿದರೆ ಗುರುತಿಸುತ್ತೇನೆ. ಸೀಲು ಮಾಡಿದ ಬಿಳಿ ಬಣ್ಣದ ಕವರ್ ನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಗಿ, ಸಾಕ್ಷಿಗೆ ಅದರಲ್ಲಿರುವ ಪಿಸ್ತೂಲನ್ನು ತೋರಿಸಿದ್ದು, ಸಾಕ್ಷಿ ಅದನ್ನು ನೋಡಿ ಗುರುತಿಸಿರುವ ಕಾರಣ ಅದನ್ನು ಮು. ಮಾಲು 2 ಎಂದು ಗುರುತಿಸಲಾಯಿತು. ಸದ್ರಿ ರಿಟ್ಸ್ ಕಾರಿನ ಛಾಯಾಚಿತ್ರವನ್ನು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.2 ಎಂದು ಗುರುತಿಸಲಾಯಿತು. ನಂತರ ಸದ್ರಿ ವ್ಯಕ್ತಿಗಳು ನನ್ನನ್ನು ಸ್ವಲ್ಪ ದೂರ ಕರೆದುಕೊಂಡು ಹೋಗಿ, ನನ್ನನ್ನು ಪಡುಬಿದ್ರೆಯ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕಾರಿನಿಂದ ಇಳಿಸಿ ಹೋಗಿರುತ್ತಾರೆ. ನಂತರ ಅಲ್ಲಿಂದ ನಾನು ಒಂದು ರಿಕ್ಷಾ ದಲ್ಲಿ ಪಡುಬಿದ್ರೆಗೆ ಹೋಗಿ ಅಲ್ಲಿಂದ ಮಂಗಳೂರಿಗೆ ಹೋಗಿ ನನ್ನ ತಮ್ಮ ಮತ್ತು ನನ್ನ ಸ್ನೇಹಿತರಿಗೆ ಕರೆ ಮಾಡಿ ವಿಷಯ ತಿಳಿಸಿರುತ್ತೇನೆ. ರಾತ್ರಿ ಸುಮಾರು 12 ರಿಂದ 1 ಗಂಟೆಯ ಹೊತ್ತಿಗೆ ನನ್ನ ತಮ್ಮ ಮತ್ತು ಸ್ನೇಹಿತರು ಮಂಗಳೂರಿಗೆ ಬಂದಿರುತ್ತಾರೆ. ಮಂಗಳೂರಿನಿಂದ ಹಿರಿಯಡ್ಕ ಪೊಲೀಸ್ ಠಾಣೆಗೆ 5 ಗಂಟೆಗೆ ಬಂದು ದೂರನ್ನು

ನೀಡಿರುತ್ತೇನೆ. ಷದ್ರಿ ದೂರನ್ನು ಈಗ ನೋಡುತ್ತಿದ್ದು, ಅದನ್ನು ನಿ.ಪಿ.3 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು. ದರೋಡೆ ಸಮಯದಲ್ಲಿ ಭಾಗಿಯಾದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ.

6. ನನ್ನ ದರೋಡೆಯಾದ 2 ಲಕ್ಷದ 57 ಸಾವಿರದ 200 ರೂಪಾಯಿಯಲ್ಲಿ 90 ಸಾವಿರ ಹಣವನ್ನು ಆರೋಪಿಗಳಿಂದ ಪೊಲೀಸರು ಅಮಾನತು ಪಡಿಸಿದ್ದು, ಷದ್ರಿ ಹಣವನ್ನು ನೋಡಿದರೆ ಗುರುತಿಸುತ್ತೇನೆ. 1 ನೇ ಆರೋಪಿಯಿಂದ ಅಮಾನತು ಪಡಿಸಿದ 38 ಸಾವಿರ ಹಣವನ್ನು ಈಗ ನೋಡುತ್ತಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮು.ಮಾಲು 3 ಎಂದು ಗುರುತಿಸಲಾಯಿತು. 2 ನೇ ಆರೋಪಿಯಿಂದ ಅಮಾನತು ಪಡಿಸಿದ 8 ಸಾವಿರ ಹಣವನ್ನು ಈಗ ನೋಡುತ್ತಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮು.ಮಾಲು 4 ಎಂದು ಗುರುತಿಸಲಾಯಿತು. 3 ನೇ ಆರೋಪಿಯಿಂದ ಅಮಾನತು ಪಡಿಸಿದ ಎರಡೂವರೆ ಸಾವಿರ ಹಣವನ್ನು ಈಗ ನೋಡುತ್ತಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮು.ಮಾಲು 5 ಎಂದು ಗುರುತಿಸಲಾಯಿತು.

7. ನಾಲ್ಕನೇ ಆರೋಪಿಯಿಂದ ಅಮಾನತು ಪಡಿಸಿದ 2 ಸಾವಿರ ಹಣವನ್ನು ಈಗ ನೋಡುತ್ತಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮು.ಮಾಲು 6 ಎಂದು ಗುರುತಿಸಲಾಯಿತು. 5 ನೇ ಆರೋಪಿಯಿಂದ ಅಮಾನತು ಪಡಿಸಿದ 4 ಸಾವಿರ ಹಣವನ್ನು ಈಗ ನೋಡುತ್ತಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮು.ಮಾಲು 7 ಎಂದು ಗುರುತಿಸಲಾಯಿತು. 6 ನೇ ಆರೋಪಿಯಿಂದ ಅಮಾನತು ಪಡಿಸಿದ 3 ಸಾವಿರ ಹಣವನ್ನು ಈಗ ನೋಡುತ್ತಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮು.ಮಾಲು 8 ಎಂದು ಗುರುತಿಸಲಾಯಿತು. 7 ನೇ ಆರೋಪಿಯಿಂದ ಅಮಾನತು ಪಡಿಸಿದ 14 ಸಾವಿರ ಹಣವನ್ನು ಈಗ ನೋಡುತ್ತಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮು.ಮಾಲು 9 ಎಂದು ಗುರುತಿಸಲಾಯಿತು. 8 ನೇ ಆರೋಪಿಯಿಂದ ಅಮಾನತು ಪಡಿಸಿದ 4 ಸಾವಿರ ಹಣವನ್ನು ಈಗ ನೋಡುತ್ತಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮು.ಮಾಲು 10 ಎಂದು ಗುರುತಿಸಲಾಯಿತು.

8. ಆರೋಪಿ ಇಲಾಹಿ ಕಡೆಯಿಂದ ಅಮಾನತು ಪಡಿಸಿದ ಎರಡೂವರೆ ಸಾವಿರ ಹಣವನ್ನು ಈಗ ನೋಡುತ್ತಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮು.ಮಾಲು 11 ಎಂದು ಗುರುತಿಸಲಾಯಿತು. ಚಾಸಾ 36 ಪ್ರವೀಣ್ ಕುಮಾರ್ ಕಡೆಯಿಂದ ಅಮಾನತು ಪಡಿಸಿದ 12 ಸಾವಿರ ಹಣವನ್ನು ಈಗ ನೋಡುತ್ತಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮು.ಮಾಲು 12 ಎಂದು ಗುರುತಿಸಲಾಯಿತು.

9. ದೂರು ಕೊಟ್ಟ ನಂತರ ಪೊಲೀಸರು ನನ್ನನ್ನು ಹಿರಿಯಡ್ಕದಿಂದ ಸುಮಾರು 3-4 ಕಿ.ಮೀ ದೂರದಲ್ಲಿರುವ ತಕ್ಷೀರು ಸ್ಥಳಕ್ಕೆ ಬಂದಿದ್ದು, ಸದ್ರಿ ಸ್ಥಳವನ್ನು ನಾನು ಪೊಲೀಸರಿಗೆ ತೋರಿಸುತ್ತೇನೆ. ಸದ್ರಿ ಸ್ಥಳವನ್ನು ಪೊಲೀಸರು ಪರಿಶೀಲಿಸಿ ಸ್ಥಳ ಮಹಜರು ಬರೆದಿರುತ್ತಾರೆ. ಸಾಕ್ಷಿ ಸ್ಥಳ ಪಂಚನಾಮೆಯನ್ನು ಸಹಿಯನ್ನು ಗುರುತಿಸಿದ್ದು, ಸ್ಥಳ ಪಂಚನಾಮೆಯನ್ನು ನಿ.ಪಿ.4 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ. 4(ಎ) ಎಂದು ಗುರುತಿಸಲಾಯಿತು. ಸದ್ರಿ ಸಮಯದಲ್ಲಿ ಪೊಲೀಸರು ಬಾವಚಿತ್ರ ತೆಗೆದಿರುತ್ತಾರೆ. ಬಾವಚಿತ್ರವನ್ನು ನಿ.ಪಿ. 5 ಎಂದು ಗುರುತಿಸಲಾಯಿತು. ನಂತರ ಪೋಲೀಸರಿಗೆ ನಾನು ಆರೋಪಿತರು ನನ್ನನ್ನು ಕಾರಿನಿಂದ ಇಳಿಸಿ ಹೋದ ಸ್ಥಳವನ್ನು ತೋರಿಸಿ ಕೊಟ್ಟಿದ್ದು, ಸದ್ರಿ ಸ್ಥಳ ಇಂಡಸ್ಟ್ರಿಯಲ್ ಏರಿಯಾ ಆಗಿದ್ದು, ಸದ್ರಿ ಸ್ಥಳವನ್ನು ಪೊಲೀಸರು ಪರಿಶೀಲಿಸಿ ಸ್ಥಳ ಪಂಚನಾಮೆಯನ್ನು ಬರೆದಿರುತ್ತಾರೆ. ಸಾಕ್ಷಿ ಸ್ಥಳ ಪಂಚನಾಮೆಯನ್ನು ಸಹಿಯನ್ನು ಗುರುತಿಸಿದ್ದು, ಸ್ಥಳ ಪಂಚನಾಮೆಯನ್ನು ನಿ.ಪಿ.6 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.5(ಎ) ಎಂದು ಗುರುತಿಸಲಾಯಿತು. ಸದ್ರಿ ಸಮಯದಲ್ಲಿ ಪೊಲೀಸರು ಬಾವಚಿತ್ರ ತೆಗೆದಿರುತ್ತಾರೆ. ಬಾವಚಿತ್ರವನ್ನು ನಿ.ಪಿ.7 ಎಂದು ಗುರುತಿಸಲಾಯಿತು. ನಂತರ 2 ದಿನ ಬಿಟ್ಟು ಪೋಲೀಸರು ಪಡುಬಿದ್ರೆ ಪೊಲೀಸ್ ಠಾಣೆಗೆ ಕರೆದಿದ್ದು, ಅಸಮಯ ಸುಂದರ್ ರಾಜ್ ಎನ್ನುವವರು ನನ್ನ ಕಪ್ಪು ಬಣ್ಣದ ಮೊಬೈಲ್ ಫೋನನ್ನು ಹಾಜರುಪಡಿಸಿದ್ದು ಅದನ್ನು ಪೊಲೀಸರು ಅಮಾನತು ಪಡಿಸಿರುತ್ತಾರೆ. ನಾನು ನನ್ನ ಫೋನನ್ನು ಠಾಣೆಯಲ್ಲಿ ನೋಡಿ ಗುರುತಿಸಿರುತ್ತೇನೆ. ಈ ಬಗ್ಗೆ ತಯಾರಿಸಿದ ಮಹಜರನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.8 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.8(ಎ) ಎಂದು ಗುರುತಿಸಲಾಯಿತು.ಸೀಲು ಮಾಡಿ ಪ್ಯಾಕ್ ಮಾಡಿದ ವಸ್ತುವನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ನೋಡಲಾಗಿ, ಅದರಲ್ಲಿರುವ ಮೊಬೈಲ್ ಫೋನನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮು.ಮಾಲು 13 ಎಂದು ಗುರುತಿಸಲಾಯಿತು.

10. ನಂತರ ನಾನು ಹಿರಿಯಡ್ಕ ಪೊಲೀಸ್ ಠಾಣೆಯಲ್ಲಿ ನನ್ನ ಮು.ಮಾಲು 1 ಜಾಕೆಟನ್ನು ಹಾಜರುಪಡಿಸಿದ್ದು, ಅದನ್ನು ಪೊಲೀಸರು ಅಮಾನತು ಪಡಿಸಿಕೊಂಡಿರುತತಾರೆ. ಈ ಬಗ್ಗೆ ತಯಾರಿಸಿದ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ. ಅದನ್ನು ನಿ.ಪಿ.9 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.9(ಎ) ಎಂದು ಗುರುತಿಸಲಾಯಿತು. ದರೋಡೆ ಮಾಡಿದ ಆರೋಪಿತರನ್ನು ಹಾಗೂ ದರೋಡೆಯಾದ ನನ್ನ ಬಂಗಾರದ ಅಭರಣಗಳನ್ನು ನೋಡಿದರೆ ಗುರುತಿಸುತ್ತೇನೆ.

**ಆರೋಪಿ 3 ಮತ್ತು 7 ಗೈರು ಹಾಜರಾಗಿದ್ದು ಹಾಗೂ ಚಾಸಾ 4 ರವರು ಬಿಡಿಸಿಕೊಂಡು ಹೋಗಿರುವ ಬಂಗಾರದ ಆಭರಣಗಳನ್ನು ಮತ್ತು 1 ನೇ ಆರೋಪಿಯ ತಂದೆ ಬಿಡಿಸಿಕೊಂಡು ಹೋಗಿರುವ ಬಂಗಾರದ ಆಭರಣಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸುವಂತೆ ನಿರ್ದೇಶಿಸಿ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.

ಭಾಷಾಂತಕಾರರ ಸಹಿ